ಇವರು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡದ ವಿಜ್ಞಾನಿಗಳಿಗೆ ಪತ್ರ ಬರೆದು ಈ ಸಮಸ್ಯೆಯನ್ನು ಅಧ್ಯಯನ ಮಾಡಿ ವರದಿ ನೀಡುವಂತೆ ಕೋರಿದರು. ಆ ಪ್ರಕಾರ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಹಾವೇರಿ ಹಾಗೂ ರಾಣೆಬೆನ್ನೂರು ತಾಲ್ಲೂಕಿನ ಕೆಲವು ಗ್ರಾಮಗಳಿಗೆ ದಿನಾಂಕ 24-12-2004ರಂದು ಕ್ಷೇತ್ರ ಭೇಟಿ ನಡೆಸಿ. ರೈತರ ಜೊತೆ ಚರ್ಚಿಸಿ ಹಾಗೂ ಸಮಸ್ಯೆಯನ್ನು ವಿಶ್ಲೇಷಿಸಿ ವರದಿ ಸಲ್ಲಿಸಿರುತ್ತಾರೆ.

ವಿಜ್ಞಾನಿಗಳು ಚಮತ್ಕಾರ ಹತ್ತಿ ಫಸಲಿನ ವಿಫಲಕ್ಕೆ ಬೆಳೆಯನ್ನು ತಡವಾಗಿ ಅಂದರೆ ಆಗಸ್ಟ್ ಮಾಹೆಯಲ್ಲಿ ಬಿತ್ತನೆ ಮಾಡಿರುವುದರಿಂದ ಗಿಡಗಳ ಬೆಳವಣಿಗೆ ಹೆಚ್ಚಾಗಿ ಹೂ, ಮೊಗ್ಗು ಹಾಗೂ ಕಾಯಿ ಬಿಡುವ ಸಾಮರ್ಥ್ಯ ಕಡಿಮೆಯಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ. ಈ ತಳಿಗಳು ಮೇ ಹಾಗೂ ಜೂನ್ ಮೊದಲನೆ ವಾರದಲ್ಲಿ ಬಿತ್ತನೆ ಮಾಡಲು ಸೂಕ್ತವಾದ ತಳಿಗಳಾಗಿರುತ್ತವೆ. ಅಲ್ಲದೇ ಈ ತಳಿಗಳು ಮಣ್ಣಿನಲ್ಲಿನ ತೇವಾಂಶದ ಕೊರತೆಗೆ ತೀವ್ರವಾಗಿ ಸ್ಪಂದಿಸುವುದರಿಂದ ತೇವಾಂಶ ಕೊರತೆಯಾದಾಗ ಗಿಡಗಳಲ್ಲಿ ಬಿಟ್ಟಂತಹ ಹೂ, ಮೊಗ್ಗು ಹಾಗೂ ಕಾಯಿಗಳು ಉದುರುತ್ತವೆ ಎಂದು ತಿಳಿಸಿರುತ್ತಾರೆ. ಈ ಕಾರಣದಿಂದ ಮಹಿಕೋ ಸಂಸ್ಥೆಯವರು ಮುಂಗಾರು ಬೆಳೆಗೆ ಜೂನ್, ಜುಲೈ ಹಿಂಗಾರು ಬೆಳೆಗೆ ಆಗಸ್ಟ್, ಸೆಪ್ಟೆಂಬರ್ ಹಾಗೂ ಬೇಸಿಗೆ ಬೆಳೆಗೆ ಜನವರಿ, ಮಾರ್ಚ್ ಎಂದು ಶಿಫಾರಸ್ಸು ಮಾಡಿರುವುದಕ್ಕೆ ಸಂಶೋಧನಾ ಆಧಾರಗಳ ವರದಿಯನ್ನು ನೀಡುವಂತೆ ತಿಳಿಸಿದ ಸದರಿ ಸಂಸ್ಥೆಯಿಂದ ವಿವರಣೆ ನಿರೀಕ್ಷಿಸಲಾಗಿದೆ.

626(1243) ಶ್ರೀ ಶಿವಾರಾಜ ಸಜ್ಜನರ್ (ಹಾವೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003-04ರ ಮುಂಗಾರು ಬೆಳೆ ವಿಮೆ ವಿತರಣೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹೌದು. ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ಒಂದು ಪ್ರದೇಶದಲ್ಲಿ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಬೇಕಾದರೆ ಆ ಪ್ರದೇಶದಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಕಂಡು ಹಿಡಿಯಲಾಗುವ ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇರಬೇಕು. ಇಳುವರಿ ಕೊರತೆಗನುಗುಣವಾಗಿ ವಿಮೆ ಮಾಡಿಸಿದ ರೈತರೆಲ್ಲರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರು. 2003-04ನೇ ಸಾಲಿನಲ್ಲಿ ಬೆಳೆಗಳನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟಕ್ಕೆ ಅಧಿಸೂಚಿಸಿ ಸೂಚಿಸಿರುವ ಪ್ರಯುಕ್ತ, ಈ ಘಟಕಗಳಲ್ಲಿನ ಪ್ರಾರಂಭಿಕ ಇಳುವರಿ,

ವಾಸ್ತವಿಕ ಇಳುವರಿ ಹಾಗೂ ಇಳುವರಿಯ ಕೊರತೆಯಲ್ಲಿ ವ್ಯತ್ಯಾಸವಿರುವುದರಿಂದ, ತಾಲ್ಲೂಕಿನಿಂದ ತಾಲ್ಲೂಕಿಗೆ ಮತ್ತು ಹೋಬಳಿಯಿಂದ ಹೋಬಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥ ಪಡಿಸುವಲ್ಲಿ ವ್ಯತ್ಯಾಸವಿರುತ್ತದೆ.

ಆ) ಉದ್ಭವಿಸುವುದಿಲ್ಲ.

627(1244) ಶ್ರೀ ಶಿವರಾಜ ಸಜ್ಜನರ್ (ಹಾವೇರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003–04ರ ಹಿಂಗಾರು ಬೆಳೆವಿಮೆ ರೈತರಿಗೆ ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹೌದು.

ಆ) 2003–04 ಹಿಂಗಾರು ಬೇಸಿಗೆ ಹಂಗಾಮಿನ ಒಟ್ಟು ಬೆಳೆ ವಿಮಾ ನಷ್ಟ ಪರಿಹಾರದ ಮೊತ್ತವಾದ ರೂ. 221.34 ಕೋಟಿಗಳನ್ನು ಇತ್ಯರ್ಥಪಡಿಸಲು ರಾಜ್ಯ ಸರ್ಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡಲು ದಿನಾಂಕ 3–1–2005ರಂದು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ಕೋರಿದ್ದು, ರಾಜ್ಯ ಸರ್ಕಾರದ ಪಾಲಾದ ರೂ. 102.46 ಕೋಟಿಗಳನ್ನು ಬಿಡುಗಡೆ ಮಾಡಲು ಸರ್ಕಾರವು ಕ್ರಮ ಕೈಗೊಂಡಿದ್ದು, ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರ ವಿತರಿಸಲಾಗುವುದು.

628(1245) ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದ ಕೆ.ಸಿ.ಸಿ. ಬ್ಯಾಂಕ್ ಪುನಶ್ಚೇತನಗೊಳಿಸುವ ವಿಚಾರ ಸರಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಇದೆ.

ಆ) ಪುನ:ಶ್ಚೇತನಕ್ಕಾಗಿ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿವೆ:

1. ಧಾರವಾಡ ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನ ಸರ್ಕಾರವು ಆದೇಶ ಸಂಖ್ಯೆ: ಸಿಎಂಡಬ್ಲ್ಯೂ 293 ಸಿಸಿಬಿ 2003, ದಿನಾಂಕ 15–9–2003ರ ರೀತ್ಯಾ 25 ಕೋಟಿ ರೂ.ಗಳನ್ನು ದಿನಾಂಕ 30–6–2003ಕ್ಕೆ ಬಾಕಿಯಿರುವ ಎಲ್ಲಾ ಸುಸ್ತಿ ಬೆಳೆ ಮತ್ತು ಮಧ್ಯಮಾವಧಿ ಸಾಲಗಳ ಮೇಲಿನ ಪೂರ್ತಿ ಬಡ್ಡಿಯನ್ನು ಮನ್ನಾ ಮಾಡಲು ಮಂಜೂರಾತಿ ನೀಡಿದೆ. ಈ ಸಂಬಂಧ ನಷ್ಟವನ್ನು ಸರ್ಕಾರ ಅಪೆಕ್ಸ್ ಬ್ಯಾಂಕ್